**ದಿನಾಂಕ: 07.11.2020 ರಂದು ಬೆಳಿಗ್ಗೆ 9–30 ಗಂಟೆಗೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್–178 (ಸಾರಕ್ಕಿ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾಡ್–178ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ, ಅಭಿವೃದ್ಧಿ ಕಾಮಗಾರಿಗಳು ಹಾಗೂ ಘನತ್ಯಾಜ್ಯ ನಿರ್ವಹಣೆ ಮತ್ತು ಕೊವಿಡ್–19ರ ಬಗ್ಗೆ ಚರ್ಚಿಸುವ ಕುರಿತು.

## : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| ಅಧ್ಯಕ್ಷರು | ನೋಡಲ್ ಅಧಿಕಾರಿ |
| ಸದಸ್ಯ ಕಾರ್ಯದರ್ಶಿ | ವಾರ್ಡ್ 178ರ ಸಹಾಯಕ ಅಭಿಯಂತರರು |
| ಸದಸ್ಯರುಗಳು | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| ಸದಸ್ಯರುಗಳು | ಬಿಡಬ್ಲ್ಯೂಎಸ್ಎಸ್‌ಬಿ ಅಭಿಯಂತರರು |
| ಸದಸ್ಯರುಗಳು | ಜೆ.ಪಿ.ನಗರ ಸಹಾಯಕ ಕಂದಾಯ ಅಧಿಕಾರಿಗಳು |
| ಸದಸ್ಯರುಗಳು | ತೋಟಗಾರಿಕಾ ಅಧೀಕ್ಷಕರು (ದಕ್ಷಿಣ) |
| ಸದಸ್ಯರುಗಳು | ಬೆಸ್ಕಾಂ ಅಧಿಕಾರಿಗಳು |
| ಸದಸ್ಯರುಗಳು | ಜೆ.ಪಿ.ನಗರ 2ನೇ ಹಂತ ನಾಗರೀಕ ಕಲ್ಯಾಣ ಸಂಘದ ಸದಸ್ಯರು ಹಾಗೂ ನಾಗರೀಕರು |

## :ನಡಾವಳಿಯ ವರದಿ:

**ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.**

- ವಾರ್ಡ್ ಸಂಖ್ಯೆ 178 ಸಾರಕ್ಕಿ ವ್ಯಾಪ್ತಿಯಲ್ಲಿನ ಧನ್ವಂತರಿ ಉದ್ಯಾನವನದಲ್ಲಿ ತೋಟಗಾರಿಕೆ ಇಲಾಖೆಯಿಂದ ಪಾರ್ಕ್ ನಿರ್ವಹಣೆ ಹಾಗೂ ಸೆಕ್ಯೂರಿಟಿ ಗಾರ್ಡ್ ಯಾರನ್ನು ನೇಮಿಸಿರುವ ಬಗ್ಗೆ ಚರ್ಚಿಸಲಾಯಿತು. ಸದರಿ ವಿಚಾರವಾಗಿ ತೋಟಗಾರಿಕಾ ಅಧೀಕ್ಷಕರು ಕ್ರಮವಹಿಸಲು ಕೋರಿದೆ.
- ಕೊವಿಡ್–19 ನಿಯಂತ್ರಣಕ್ಕಾಗಿ ಮಾಸ್ಕ್, ಸಾಮಾಜಿಕ ಅಂತರ ಹಾಗೂ ಸ್ಯಾನಿಟೈಜ್ ಕೊಡಲು ಅತೀ ತುರ್ತಾಗಿ ಕ್ರಮ ಕೈಗೊಳ್ಳುವ ಬಗ್ಗೆ. ಹಾಗೂ ಎಸ್‌ಎಲ್‌ಎನ್ ಹೋಟೆಲ್ ಸುತ್ತ ಸ್ಯಾನಿಟೈಸರ್ ಮಾಡಿರುವ ಬಗ್ಗೆ ಸೂಚಿಸಲಾಯಿತು.

ಮು.ತಿ.ನೋ.

- ಕೋವಿಡ್-19 ಸೋಂಕು ತಡೆಗಟ್ಟಲು ಪ್ರತಿನಿತ್ಯ ವಾಯು ವಿಹಾರಕ್ಕೆ ಬರುವ ಸಾರ್ವಜನಿಕರಿಗೆ ಮಾಸ್ಕ್, ಸಾಮಾಜಿಕ ಅಂತರ ಹಾಗೂ ಸ್ಯಾನಿಟೈಜ್ ಕುರಿತು ನಾಮಫಲಕಗಳನ್ನು ಅಳವಡಿಸುವ ಬಗ್ಗೆ ಸೂಚಿಸಲಾಯಿತು. ಸದರಿ ವಿಚಾರವಾಗಿ ಯೋಜನೆ (ದಕ್ಷಿಣ) ಸಹಾಯಕ ಕಾರ್ಯಪಾಲಕ ಅಬಿಯಂತರರು ಹಾಗೂ ತೋಟಗಾರಿಕಾ ಅಧೀಕ್ಷಕರಿಗೆ ಕ್ರಮವಹಿಸಲು ಕೋರಿದೆ.
- ಪಾರ್ಕಿನ ಒಳಗೆ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯದ ಬಗ್ಗೆ ಚರ್ಚಿಸಲಾಯಿತು. ಯೋಜನೆ (ದಕ್ಷಿಣ) ಸಹಾಯಕ ಕಾರ್ಯಪಾಲಕ ಅಬಿಯಂತರರು ಹಾಗೂ ತೋಟಗಾರಿಕಾ ಅಧೀಕ್ಷಕರಿಗೆ ಕ್ರಮವಹಿಸಲು ಕೋರಿದೆ.
- 15ನೇ ಅಡ್ಡರಸ್ತೆಯ(ರಿಂಗ್ ರೋಡ್) ಹೊರ ವರ್ತುಲ ರಸ್ತೆಯ ರಸ್ತೆ ಡಾಂಬರೀಕರಣ ಹಾಗೂ ತುರ್ತಾಗಿ Desilting ಮಾಡಲು ಕೋರಲಾಯಿತು.
- ಅರಣ್ಯ ಇಲಾಖೆಯವರು ಮೀಟಿಂಗ್‌ಗೆ ಗೈರು ಹಾಜರಾಗುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸಾರ್ವಜನಿಕರು ಮುಂದಿನ ಸಭೆಗಳಲ್ಲಿ ಹಾಜರಾಗಲು ಕೋರಿರುತ್ತಾರೆ.
- ರಸ್ತೆ ಬದಿಯ ವ್ಯಾಪಾರಿಗಳು ಪಾದಚಾರಿ ಮಾರ್ಗದಲ್ಲಿ ಇಟ್ಟಿರುವ ಹೋಟೆಲ್ ಹಾಗೂ ಕ್ಯಾಂಟೀನ್ ನಡೆಸುತ್ತಿರುವವರು ಸಾಮಾಜಿಕ ಅಂತರವನ್ನು ಪಾಲಿಸದೇ ಸಾರ್ವಜನಿಕರು ಇರುವುದು ಕಂಡುಬಂದಿದ್ದು, ಮಾರ್ಷಲ್‌ಗಳಿಗೆ ಕ್ರಮವಹಿಸಲು ಸೂಚಿಸಲಾಗಿರುತ್ತದೆ.
- ಮೆಡಿಕಲ್ ಹೆಲ್ತ್ ಆಫೀಸರ್ ಮಿಟಿಂಗ್ಗಿಗೆ ಹಾಜರಾಗುವ ಬಗ್ಗೆ ಚರ್ಚಿಸಲಾಯಿತು.
- 14ನೇ ಅಡ್ಡರಸ್ತೆ ಮತ್ತು 15ನೇ ಅಡ್ಡರಸ್ತೆ, 1ನೇ ಹಂತ ಜೆ.ಪಿ.ನಗರದಲ್ಲಿ ಬೀದಿ ದೀಪಗಳ ಬಗ್ಗೆ ದೂರು ನೀಡಿದ್ದರೂ ಸಹ ಸಂಬಂಧಪಟ್ಟ ಇಲಾಖೆಯವರು ಯಾವುದೇ ಕ್ರಮಕೊಳ್ಳದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಕೂಡಲೇ ದುರಸ್ಥಿಪಡಿಸಲು ಕೋರಿರುತ್ತಾರೆ.

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು ವಾರ್ಡ್ 178
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ